

ಮರವಂತೆ
ನದಿ– ಕಡಲಿನ
ಮನಮೋಹಕ
ದೃಶ್ಯ

ಇರ್ಲಿ. ಗಣ್ಪತಿ ಮೂರ್ತಿ ಹಿಡ್ಕಂಡ್ ಹಾಜರಾತ್ರು. ಕಾಯಿ, ಬೆಲ್ಲ, ಅಕ್ಕಿ ಜತಿಗೆ ಕೈಲಾಪಷ್ಟು ದುಡ್ಡು ಕೊಟ್ಟು, ಗಣ್ಪತಿಗೊಂದು ಅಡ್ಡ್ ಬಿದ್ರೆ ಮುಗೀತು. ಒಂದು ಪ್ರಸಂಗ ಆಡಿ ತೋರಿಸ್ತರ್.

ಸ್ತ್ರೀವೇಷಧಾರಿ ಉದ್ದ, ಅಗಲ, ಭರ್ತಿ ಆಳಾದರೂ ಕಾಂಬೂಕೆ ಥೇಟ್ ಹೆಣ್ಣಿನ ಕಣಂಗೆ ಇತ್ರ್ರ್. ನಡು, ಮೈಕಟ್ಟು ಹೆಂಗಿರುತ್ ಅಂದ್ರೆ ಚಂದ ಅಂತ್ರಿ ಅವರ ನಡಿ, ವಯ್ಯಾರ ಎಲ್ಲಾ. ಚಿಕ್ಕಾಟ ಮೇಳ್ದವರು ಬಪ್ಪು ಒಂದೆರಡು ದಿನ ಮುಂಚಿತಾಯೇ ಕರಪತ್ರ ಹಂಚಿತ್ರ್ರ್. ಹಂಗಾಯಿ ಮನಿಯವರೆಲ್ಲ ಮಳಿ ಇರ್ಲಿ, ಇಲ್ಲ್ದೇ ಇರ್ಲಿ, ಚಿಕ್ಕಾಟ ಮೇಳ್ದವರು ಮನಿ ಬಾಗ್ಲು ಕಣ್ಕಂಡ್ ಹೋಪುಕಾಗ ಅಂದ್ವೇಳಿ, ಅವ್ರು ಬಪ್ಪುದನ್ನೇ ಕಾಯ್ತಿತ್ರ್ರ್. ಜತಿಗೆ ಚಿಕ್ಕ ಮೇಳದ್ ಕಲಾವಿದ್ರು ಮನಿಯೊಳಗೆ ಬಪ್ಪತ್ತೀಗೆ ಭಾಗವತಿಕೆ ಮಾಡ್ಕಂಡೇ ಬತ್ರು, ಗಣ್ಪತಿ ಮೂರ್ತಿ ಹೊತ್ಕಂಡ್ ಬತ್ರ್. ವಿದ್ಯಾಬುದ್ಧಿ, ಕಲೆಗೂ ದೊಡ್ ಒಡಿಯಾನಾದ ಗಣ್ಪತಿಯೇ ಬಂದ್ನೇನೋ ಅಂಥ ಖುಷಿ ಪಡ್ತ್ರ್. ಬಯಲಲ್ ಆಡೂ ಆಟ, ಮನಿಯೊಳಗೆ ಆಡುವತ್ತಿಗೆ ಖುಷಿ ಯಾರಿಗಾತ್ತಿಲ್ಲ. ಚಳ್ಳಿಪಿಳ್ಳಿಗಳೆಲ್ಲ ಮನಿ ಹಜಾರದೊಳ್ಗ್ ಆಯ್ಕಂಡ್, ಪ್ರಸಂಗ ಕಾಂತೋ.

ಮಳಿಗಾಲ ಅಂಬೂದೇ, ಆದ್ರೆ ಅಲ್ಲೂ ಕಷ್ಟ ತಪ್ಪಿದ್ದಲ್ಲ ಕಾಣಿ. ಯಕ್ಷಗಾನ ಕಲಾವಿದ್ರಿಗೆ ಯಾವ್ದೆ ಆಟ ಇಪ್ಪುದಿಲ್ಲ. ಕಡಲ ಮಕ್ಕಳು ಗಾಳಿ ಮಳಿ ಅಂದ್ಕಂಡ್ ಬೋಟ್ ಸಮುದ್ರದಂಗೆ ಇಳಿಸ್ಲೂಕ್ಕಿಲ್ಲ. ಹೆಚ್ಚು ಕಮ್ಮಿ ಮೂರು ತಿಂಗಳ್ ಮನಿಯಲ್ಲೇ ಇರ್ಕ್. ಕಡಲಮಕ್ಳ್ ನಟ್ಟಿ, ಬೇಸಾಯ ಅಂದ್ಕಂಡ್ ಈ ಮೂರು ತಿಂಗ್ಳ್ ತಳ್ರೆ, ಆಟ ಆಡೋರು ಹಿಮ್ಮೇಳದೊಟ್ಟಿಗೆ ವೇಷಭೂಷಣ ಹಾಯ್ಕಂಡ್ ಚಿಕ್ಕಮೇಳ ಮಾಡ್ತ್ರು. ಹತ್ ನಿಮಿಷದ್ ಪ್ರಸಂಗದಲ್ಲಿ ರಾಮಾಯಣ, ರತಿ ಮನ್ಮಥರ ಪ್ರಸಂಗವನ್ನೆ ಆಡಿ ತೋರ್ಸತ್ರ್. ಅಂಥ ಚಿಕ್ಕಾಟ ಮನಿಯಂಗೆ ಆದ್ರೆ, ಶುಭ ಅಂಬೂ

| ಪ್ರಾದೇಶಿಕ ಪದಗಳ ಅರ್ಥ | |
|---|---|
| ಅಸೋಡಿ– ಆಷಾಢ | ಜಡ್ಡು– ಕಾಯಿಲೆ |
| ಕಿಮಿ– ಕಿವಿ | ಜಾನ್ಸ್ಕಂಡ್– ಧೇನಿಸು |
| ಗೌಜಿ– ಗಲಾಟೆ | ಬಿಡು– ಬಿಡುವು |
| ಸ್ವಾಣಿ– ಸೋಣೆ | ನಂಬವಳಿ– ನಂಬಿಕೆ |

ಯೋಚ್ನೆಯೂ ಇಪ್ಪುಕೋಯೋ ಏನೋ, ಚಿಕ್ಕಾಟ ಅಸೋಡಿ ಗಾಳಿಲ್ಲೂ ನಡೀತ್.

ಹಂಗ್ ಅಸೋಡಿ ಮುಗೀತಂಬತ್ತಿಗೆ ಸ್ವಾಣಿ ತಿಂಗಳ್ ಶುರು ಆತ್ ಕಾಣಿ. ಎಲ್ಲೇ ಕಂಡ್ರೂ ಸ್ವಾಣಿ ಆರತಿ. ಕೋಟೇಶ್ವರದ ಕೋಟಿಲಿಂಗೇಶ್ವರ, ಕೋಟ ಹಲವು ಮಕ್ಕಳ ತಾಯಿ ದೇವಸ್ಥಾನ, ಆನಿಗುಡ್ಡಿ, ಮಂದಾರ್ತಿ, ಕುಮ್ರಗೋಡುವಿನ ಉದ್ಭವ ಗಣಪತಿ, ಮಾಬುಕಳದ್ ಗಂಗಾಧರೇಶ್ವರ ದೇವಸ್ಥಾನ, ಮಾಕಾಳ್ತಿ ದೇವಸ್ಥಾನ ಹಿಂಗೆ ಯಾವ ಬದಿಗೆ ಹೋಯ್ನಿ, ಸ್ವಾಣಿ ತಿಂಗ್ಳಲ್ ಹೋದ್ರೆ, ಸ್ವಾಣಿ ಆರ್ತಿ ಆತಿರ್ತ್. ಸಿಂಹ ಮಾಸದಲ್ಲಿ ಸೂರ್ಯನ ಬೆಳ್ಕ್ ಪ್ರಖರ ಇರುತ್. ವಿಶೇಷ ಬತ್ತಿ ಬಳಸಿ, ಬಗಿ ಬಗಿದ್ ಆರತಿ ಮಾಡ್ತ್ರು ದೇವ್ರಿಗೆ. ಕಾಂಬೂಕೆ ಎಷ್ಟು ಚಂದ. ಮಬ್ಬೆಳಕ್ಕಲ್ಲಿ ಕಪ್ಪು ದೇವರ ಮೂರ್ತಿ ಮಂದೆ ಬಂಗಾರದ ಬಣ್ಣದ ದೀಪದಲ್ಲಿ ದೇವ್ರ್ ಮುಖ ಕಾಂಬೂಕೆ ಆಪು ಖುಷಿಯೇ ಬೇರೆ. ಮೂರ್ತಿಯ ತೇಜಸ್ಸು, ಓಜಸ್ಸನ್ನ ವಿಶೇಷ ಅಂಬು ಬೆಳ್ಕಲ್ಲಿ ಸೇವೆ ಕೊಡೊನೂ ಕಾಣ್ಲೆ. ಆ ಬೆಳ್ಕಂಗೆ ಮನಸ್ಸಲ್ಲಿಪ್ಪು ಮಬ್ಬೆಲ್ಲ ಹೋಯ್ಲಿ ಅಂಬೂ ಆಲೋಚನಿ ಇತ್. ಹಂಗಾಯಿ ನಮ್ನಿ ನಮ್ನಿ ಆರ್ತಿ ಮಾಡ್ತ್ರ್. ಸ್ವಾಣೆ ತಿಂಗಳಲ್ಲಿ ಒಂದ್ ಮನಿಯಿಂದಾರೂ ನಿತ್ಯ ಸ್ವಾಣೆ ಆರ್ತಿ ಇರುತ್.

ಶ್ರಾವಣದಲ್ಲಿ ಹೊಸಿಲ ಪೂಜಿದ್ ಭಾರಿ ಗಮ್ಮತ್. ನಿತ್ಯ ಹೊಸಿಲ್ ಮೇಲೆ ಶೇಡಿ ಮಣ್ಣಲ್ಲಿ ರಂಗೋಲಿ ಬರ್ದ್ರು, ಪೂಜಿ ಮಾಡ್ತರ್. ಒಂದು ತಿಂಗ್ಳ್ ಪೂರ್ತಿ ಮಾಡೋ ಹೊಸಿಲ ಪೂಜೆಗೆ ಹುರುಳಿ ಹೂವು, ಹುದ್ಧೋಳ್ ಹೂವು, ರಥಪುಷ್ಪ ಹೂವು, ಬಾಗಳ್ ಹೂವು ಇರ್ಕೆ. ಶೇಡಿಮಣ್ಣಿನಿಂದ ಹೊಸಿಲ ಮೇಲ್ ರಂಗೋಲಿ ಬರ್ದ್ರು ಹಂಗೆ ತುಳಸಿಗೂ ರಂಗೋಲಿ ಬರ್ದ್ರು, ಈ ಹೂವೆಲ್ಲ ಇಟ್ ಪೂಜಿ ಮಾಡ್ತ್ರ್. ಆರೆ, ತಿಂಗಳ್ ಕೊನೆಲಿ ಕೆಲವು ಕಡೆ ಅಜ್ಜಿ ಓಡ್ಸೋ ಸಂಪ್ರದಾಯ ಇತ್ತೇ. ಆ ದಿನ ಹೊಸಲ ಮೇಲೆ ಉದ್ದಿನ ದೋಸಿ, ಅವಲಕ್ಕಿಯಂಥ ಪ್ರಸಾದ್ ಇಟ್ಟ್, ಮನಿ ಸದಸ್ಯರೇ ಅದನ್ನ ಹಿಡ್ಕಂಡ್ ಓಡ್ತ್ರು, ಆಗ ಅಜ್ಜಿ ಆದವರು ಕೋಲಿಂದ ಬಾರ್ಸೂಕ್ ಹೋತ್ರ್, ಹಂಗೆ ಅಜ್ಜಿಯ ಒಂದು ಸಣ್ಣ ಕದಲಿಕೆಯೇ ಅಜ್ಜಿ ಓಡ್ಸುದ್ ಸಂಪ್ರದಾಯ ಅಂಬೂ ನಂಬವಳಿಯೂ ಕೆಲವು ಕಡೆ ಇತ್. ಮುಂದ್ ಬಪ್ಪು ನವರಾತ್ರಿ ತಿಂಗಳ ದೇವಿಯೇ ಅಜ್ಜಿ ರೂಪ್ದಲ್ಲಿ ಬತ್ಲ್ರ್ ಅಂತಾನೂ ಒಂದು ನಂಬಿಕೆ ಇತ್. ಕಡಿಗೆ ಭಾದ್ರಪದ ಬತ್. ಗಣ್ಪತಿನ ಈಗೀಗ ಕೂರ್ಸೂದು ಬಂದೀತ್. ಮೊದಲೆಲ್ಲ ಆನಿಗುಡ್ಡಿಗ್ ಹೋಯಿ, ಪಂಚಕಜ್ಜಾಯ ಸೇವಿ ಕೊಟ್ಟು ಬಪ್ಪುದಿದಿತ್. ಮನೆಯಲ್ ಕಡ್ಬು ಮಾಡಿ, ಮೋದ್ಕ ಮಾಡಿ ಅದನ್ನೆ ಗಣ್ಪತಿಗೂ ನೈವೇದ್ಯ ಮಾಡಿ, ಚಂದ್ರನ್ ಕಾಣ್ದೆ ರಾತ್ರಿ ಉಂಡು ಮನಿಕಂಡ್ರೆ ಅಲ್ಲೀಗ್ ಚೌತಿ ಸಮಾಪ್ತಿ ಆದಂಗಾತಿದಿತ್.

ಚೌತಿ ಮುಗಿತಿದ್ದಂಗ್ ಹಂಗ್ ನವರಾತ್ರಿ ಶುರು ಆತ್. ಮನಿ ತುಂಬಾ ಜನ. ಗೌಜಿ ಇರ್ಕೆ. ಎಲ್ಲೆಲ್ಲೋ ಇದ್ದವ್ರೆಲ್ಲ ಮನಿಯಂಗ್ ನವರಾತ್ರಿ ಪೂಜಿ ಅಂದ್ಕಂಡ್ ಬಿಡು ಮಾಡ್ಕಂಡ್ ಬತ್ರ್. ಕಣಗಿಲೆ, ಜಾಜಿ, ಸಂಪಿಗೆ, ಪಾರಿಜಾತ, ಕೇದಗೆ, ಸಿಂಗಾರ, ಮಲ್ಲಿಗಿ, ಗುಲಾಬಿ, ತಾವರೆ, ದಾಸ್ವಾಳ ಹಿಂಗೆ ಬಗಿ ಬಗಿ ಹೂಗಳಿಂದ ದೇವಿಗೆ ಅಲಂಕಾರ ಮಾಡಿ ನವರಾತ್ರಿ ಒಂಬತ್ತ್ ದಿನವೂ ದೇವಿಗೆ ಬಗಿ ಬಗಿದ್ ಅಡ್ಗಿ ಮಾಡಿ ಬಳಸ್ತ್ರ್. ಮಡಿಯಲ್ ಅಡ್ಗಿ ಮಾಡೂಕಂದ್ವೇಳಿ ಮನಿ ಹೆಂಗಸ್ರೆಲ್ಲ ಮುನಿಸು ಮರ್ತ್ರು ಒಟ್ಟಾತ್ರ್. ಬದುಕನ್ನ ಎಲ್ಲೆಲ್ಲೊ ಕಟ್ಕೊಂಡವರೆಲ್ಲ ದೇವಿ ಮುಂದೆ ಸಾಷ್ಟಾಂಗ ನಮಸ್ಕಾರ ಹಾಕೂಕೆ ಅಂದ್ವೇಳಿ ಬತ್ರ್. ಮನಿಯಲ್